RNU AIR DHARWAD

NOVEMBER 08, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು

<><><>

- **ಇಂದು ನರಕ ಚತುರ್ದಶಿ;** ನಾಡಿನಾದ್ಯಂತ ದೀಪಾವಳಿ ಸಂಭ್ರಮ–ಗಣ್ಯರ ಶುಭಾಶಯ.
- **ಶಿವಮೊಗ್ಗ ಜಿಲ್ಲೆ, ಭದ್ರಾವತಿಯ** ಶ್ರೇಯಾ ನಾಗೇಂದ್ರ ಗೌಡ, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಪರೀಕ್ಷೆಯಲ್ಲಿ, ದೇಶಕ್ಕೆ ಮೊದಲ ರ್‍ಯಾಂಕ್.
- **ಮೇರಿ ಕ್ಯೂರಿ ಅವರ ಜನ್ಮ ದಿನದ ಪ್ರಯುಕ್ತ,** ರಾಜ್ಯದ ವಿವಿಧೆಡೆ, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆ.
- **12ನೇ ತಾರೀಖು,** ಪಕ್ಷಿ ಮಾನವ ಸಲೀಂ ಅಲಿ ಅವರ ಜನ್ಮದಿನ; ರಾಜ್ಯಾದ್ಯಂತ ಪಕ್ಷಿ ವೀಕ್ಷಣೆ ಸಪ್ತಾಹ.

<><><>

ಈಗ ವಾರ್ತೆಗಳ ವಿವರ

<><><>

'ಸಣ್ಣ ದೀಪಾವಳಿ' ಎಂದೇ ಕರೆಯಲಾಗುವ, ನರಕ ಚತುರ್ದಶಿ ಅಥವಾ 'ಲಕ್ಷ್ಮೀ ಪೂಜೆ'ಯನ್ನು ಇಂದು, ನಾಡಿನಾದ್ಯಂತ ಸಂಭ್ರಮ–ಸಡಗರದಿಂದ ಆಚರಿಸಲಾಗುತ್ತಿದೆ. ಇಂದು ಸೂರ್ಯೋದಯದ ಸಮಯದಲ್ಲಿ, 'ಚತುರ್ದಶಿ ತಿಥಿ' ಹಿನ್ನೆಲೆ, 'ಕಾಳಿ ಚೌದಸ್' ಹಾಗೂ ಸಂಜೆ ಅಥವಾ ಮಧ್ಯರಾತ್ರಿಯಲ್ಲಿ ನೆರವೇರಿಸುವ ಕೆಲವು ವಿಧಿವಿಧಾನಗಳು, ಶನಿವಾರದ ಸಂಜೆಯಿಂದಲೇ ಆರಂಭವಾಗಿವೆ. ನಾಳೆ, ಸೋಮವಾರ ದೀಪಾವಳಿ ಅಮಾವಾಸ್ಯೆ. ಮಂಗಳವಾರ ಬಲಿ ಪಾಡ್ಯಮಿಯಂದು, ಬಲೀಂದ್ರ ಪೂಜೆ. ಅಂಗಡಿ–ಮುಂಗಟ್ಟುಗಳಲ್ಲಿ ವಿಶೇಷ ಪೂಜೆ ಜರುಗಲಿದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ ಬಾಂಧವರಿಗೆ, ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯ ಕೋರಿದ್ದಾರೆ.

<><><>

ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ, ದೀಪಾವಳಿ ಹಬ್ಬದ ಹಿನ್ನೆಲೆ, ಲೋಕಭವನದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ, ಹಬ್ಬದ ಶುಭಾಶಯ ತಿಳಿಸಿದರು. ನಾಡಿನ ಸಮಸ್ತ ಜನತೆಗೆ ದೀಪಾವಳಿ ಶುಭಾಶಯ ಕೋರಿದರು.

<><><>

ದೀಪಾವಳಿ ಹಿನ್ನೆಲೆ, ಚಿಕ್ಕಮಗಳೂರು ಜಿಲ್ಲೆ, ಬಿಂಡಿಗ ದೇವಿರಮ್ಮ ಜಾತ್ರೆ ಬೆಟ್ಟದಲ್ಲಿ ಆರಂಭಗೊಂಡಿದೆ. ವಿಶೇಷ ಪೂಜೆ ಹಾಗೂ ಇಂದು ಸಂಜೆ ದೀಪೋತ್ಸವ ನಡೆಯಲಿದೆ.

<><><>

ವಿಜಯನಗರ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ, ದೀಪಾವಳಿಯನ್ನು ದೀಪ ಬೆಳಗಿಸಿ, ಪರಿಸರ ಸ್ನೇಹಿ ಹಸಿರು ಪಟಾಕಿ ಬಳಸಿ, ಆಚರಿಸುವಂತೆ ಮಕ್ಕಳಲ್ಲಿ ಮನವಿ ಮಾಡಿದ್ದಾರೆ.

<><><>

ಶಿವಮೊಗ್ಗ ಜಿಲ್ಲೆ, ಭದ್ರಾವತಿ ತಾಲೂಕು, ತಿಮ್ಮಾಪುರ ಗ್ರಾಮದ, ಶ್ರೇಯಾ ನಾಗೇಂದ್ರ ಗೌಡ, ಕೇಂದ್ರ ಲೋಕಸೇವಾ ಆಯೋಗ – ಯು.ಪಿ.ಎಸ್.ಸಿ. ನಡೆಸುವ, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ – ಎನ್.ಡಿ.ಎ. ಪರೀಕ್ಷೆಯ, ಮಹಿಳಾ ವಿಭಾಗದಲ್ಲಿ, ದೇಶಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಪ್ರಸ್ತುತ, ದಕ್ಷಿಣಕನ್ನಡ ಜಿಲ್ಲೆಯ, ಸುರತ್ಕಲ್ ಇಂಜಿನೀಯರಿಂಗ್ ಕಾಲೇಜಿನಲ್ಲಿ, ವ್ಯಾಸಂಗನಿರತ ಶ್ರೇಯಾ, ತಮ್ಮ ತಂದೆ ಜೆ.ನಾಗೇಂದ್ರ ಹಾಗೂ ತಾಯಿ ಡಾಕ್ಟರ್ ಬಿ.ಎಮ್.ಆಶಾ ಅವರ ಪ್ರೋತ್ಸಾಹದಿಂದ, ಪ್ರಥಮ ಪ್ರಯತ್ನದಲ್ಲೇ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಉಪಮುಖ್ಯಮಂತ್ರಿ ಡಾಕ್ಟರ್ ಜಿ.ಪರಮೇಶ್ವರ, ಅಭಿನಂದಿಸಿದ್ದಾರೆ. ಶ್ರೇಯಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶ್ರೇಯಾ ನಾಗೇಂದ್ರ ಗೌಡ ಧ್ವನಿ 45 ಸೆಕೆಂದುಗಳು

<><><>

ಮೇಡಂ ಮೇರಿ ಕ್ಯೂರಿ ಅವರ ಜನ್ಮ ದಿನದ ಪ್ರಯುಕ್ತ, ಶನಿವಾರ, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ ಆಚರಿಸಿದ, ವರದಿಗಳು ಬಂದಿವೆ. ಮಾರಣಾಂತಿಕ ಕಾಯಿಲೆ ಕ್ಯಾನ್ಸರ್ ಎಳವೆಯಲ್ಲಿ ಪತ್ತೆ, ತಡೆಗಟ್ಟುವಿಕೆ ಮತ್ತು ಸಕಾಲಿಕ ಚಿಕಿತ್ಸೆ, ಉಪಶಮನ ಆರೈಕೆ ಕುರಿತು, ಜನ ಜಾಗೃತಿ ಮೂಡಿಸಲಾಗಿದೆ. ಬಾಗಲಕೋಟೆಯ, ಶ್ರೀನಿವಾಸ ಕಾಮುರ್ತಿ, ಕಳೆದ 15 ವರ್ಷಗಳಿಂದ ಕ್ಯಾನ್ಸರ್‌ದೊಂದಿಗೆ, ಹೋರಾಟ ನಡೆಸುತ್ತಲೇ, ತಮ್ಮ ಸಕಾರಾತ್ಮಕ ಮನೋಸ್ಥಿತಿ ಮತ್ತು ಆಪ್ತ ಸಮಾಲೋಚನೆ ಮೂಲಕ, ಮಾದರಿಯಾಗಿದ್ದಾರೆ. ಶ್ರೀನಿವಾಸ ಕಾಮುರ್ತಿ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಶ್ರೀನಿವಾಸ ಕಾಮುರ್ತಿ ಧ್ವನಿ 50 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ, 12ನೇ ತಾರೀಖಿನ ವರೆಗೆ, ಜನವಿಜ್ಞಾನಿಗಳು, ಪಕ್ಷಿ ವೀಕ್ಷಣಾ ಸಪ್ತಾಹ ಆಚರಿಸುತ್ತಿದ್ದಾರೆ. ಪಕ್ಷಿಗಳು, ಅವುಗಳ ಪ್ರಭೇದ ಗುರುತಿಸುವಿಕೆ, ವಲಸೆ ಮತ್ತು ಪಥ ಅಧ್ಯಯನ, ಆಹಾರ ಪದ್ಧತಿ, ಪಕ್ಷಿಗಳ ಧ್ವನಿ ಹಾಗೂ ಆವಾಸಸ್ಥಾನ ಕುರಿತು, ಗಣತಿ ಮತ್ತು ವೀಕ್ಷಣಾ ಮಾಹಿತಿ ದಾಖಲಿಸಲಾಗುತ್ತಿದೆ. ವಿಜಯನಗರ ಜಿಲ್ಲೆ, ಹೊಸಪೇಟೆಯ ಖ್ಯಾತ ಪಕ್ಷಿಮಿತ್ರ, ಡಾಕ್ಟರ್ ಸಮದ್ ಕೊಟ್ಟೂರು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಸಮದ್ ಕೊಟ್ಟೂರು ಧ್ವನಿ 50 ಸೆಕೆಂದುಗಳು

<><><>

ಕೃಷಿ ಕ್ಷೇತ್ರದಲ್ಲಿ, ಮಹತ್ವದ ಸಾಧನೆಗೈಯ್ದ, ಪ್ರಗತಿಪರ ರೈತ ಮಹಿಳೆ ರಾಯಚೂರು ಜಿಲ್ಲೆಯ, ಕವಿತಾಳದ ಕವಿತಾ ಮಿಶ್ರಾ ಹಾಗೂ ಧಾರವಾಡ ಜಿಲ್ಲೆ, ಅಣ್ಣಿಗೇರಿಯ, ಪದ್ಮಶ್ರೀ ಡಾಕ್ಟರ್ ಅಬ್ದುಲ್ ಖಾದರ್ ನಡಕಟ್ಟಿನ ಅವರಿಗೆ, 'ಚೇತನ ಶ್ರೀ' ಪ್ರಶಸ್ತಿ ನೀಡಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಗೌರವಿಸಿದರು. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಚೇತನ ಸಮೂಹ ಸಂಸ್ಥೆಯಲ್ಲಿ, ಸಚಿವರು ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಸಭಾಭವನ ಉದ್ಘಾಟಿಸಿ, ಚೇತನ ಶ್ರೀ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಧಾನ ಪರಿಷತ್ ಶಾಸಕ ಬಸವರಾಜ ಹೊರಟ್ಟಿ, ಸಂಸದ ಜಗದೀಶ ಶೆಟ್ಟರ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

ತುಮಕೂರು–ರಾಯದುರ್ಗ, ಒಟ್ಟು 207 ಕಿಲೋ ಮೀಟರ್ ಉದ್ದದ, ಹೊಸ ರೈಲು ಮಾರ್ಗ ಯೋಜನೆಯ ಭಾಗವಾದ, ಪಾವಗಡ–ಕೊತ್ತಾಲಂ–ಮಡಕಸಿರ–ಮಧುಗಿರಿ–ಕೊರಟಗೆರೆ ಮಧ್ಯದ, 78 ಕಿಲೋ ಮೀಟರ್ ಉದ್ದದ, ಹೊಸ ರೈಲು ಮಾರ್ಗದ ಕಾಮಗಾರಿಯನ್ನು, ರೇಲ್ವೆ ಖಾತೆ ರಾಜ್ಯ ಸಚಿವ, ವಿ. ಸೋಮಣ್ಣ ಪರಿಶೀಲಿಸಿದರು. ರೈಲು ನಿಲ್ದಾಣಗಳ ಕಾಮಗಾರಿಗಳನ್ನು ಅವಲೋಕಿಸಿದ ಸಚಿವರು, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ, ಸೂಚಿಸಿದರು.

<><><>

ಬಂಗಾಳದ ಖ್ಯಾತ ಕವಿ, ಬಂಕಿಮಚಂದ್ರ ಚಟ್ಟೋಪಾಧ್ಯಾಯ ರಚಿಸಿದ, ರಾಷ್ಟ್ರೀಯ ಗೀತೆ, ವಂದೇ ಮಾತರಂ, 151 ವರ್ಷ ಪೂರ್ಣಗೊಳಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಶುಭ ಹಾರೈಸಿದ್ದಾರೆ. ವಂದೇ ಮಾತರಂ, ದೇಶ ಮೊದಲು ಎಂಬ ಪರಿಕಲ್ಪನೆ ನೀಡಿದೆ. ವಂದೇ ಮಾತರಂ, ರಾಷ್ಟ್ರದ ಅಸ್ಮಿತೆಯಾಗಿದ್ದು, ತಾಯ್ನೆಲದ ಬಗ್ಗೆ ಗೌರವ ಮತ್ತು ದೈವಿಕ ಭಾವನೆ ಮೂಡಿಸುತ್ತಿದೆ ಎಂದು, ತಮ್ಮ ಸಂದೇಶದ ಮೂಲಕ, ಅಭಿಮಾನ ವ್ಯಕ್ತಪಡಿಸಿದ್ದಾರೆ.

<><><>

ಭಾರತದ ಮೊದಲ ಮಾನವರಹಿತ ಚಂದ್ರಯಾನ ನೌಕೆ, 'ಚಂದ್ರಯಾನ–1', 2008ರ ನವೆಂಬರ್ 8 ರಂದು, ಯಶಸ್ವಿಯಾಗಿ ಚಂದ್ರನ ಕಕ್ಷೆ ಪ್ರವೇಶಿಸಿದ, ದಿನವಿಂದು.

<><><>

"ಬೆಂಗಳೂರು ಸ್ಕಿಲ್ ಸಮ್ಮಿಟ್ – 2026" ರಲ್ಲಿ, ಶಿವಮೊಗ್ಗ ಸರ್ಕಾರಿ ಉಪಕರಣಾಗಾರದ, ಎಚ್.ಪಿ.ನಾಗರಾಜ, "ಅತ್ಯುತ್ತಮ ತರಬೇತುದಾರ" ಪ್ರಶಸ್ತಿಗೆ, ಭಾಜನರಾಗಿದ್ದಾರೆ.

ಜೀವಂತ ಮರಗಳನ್ನು ಮರು ನಾಟಿ ಮಾಡಬಲ್ಲ, ಧಾರವಾಡದ ಅಸ್ಲಂ ಜಹಾನ್ ಅಬ್ಬೀಹಾಳ ಅವರಿಗೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ರಾಜ್ಯೋತ್ಸವ ಸನ್ಮಾನ ಇಂದು ಸಂಜೆ 5.30ಕ್ಕೆ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಇಂದು ನರಕ ಚತುರ್ದಶಿ;** ನಾಡಿನಾದ್ಯಂತ ದೀಪಾವಳಿ ಸಂಭ್ರಮ–ಗಣ್ಯರ ಶುಭಾಶಯ.
- **ಶಿವಮೊಗ್ಗ ಜಿಲ್ಲೆ, ಭದ್ರಾವತಿಯ** ಶ್ರೇಯಾ ನಾಗೇಂದ್ರ ಗೌಡ, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಪರೀಕ್ಷೆಯಲ್ಲಿ, ದೇಶಕ್ಕೆ ಮೊದಲ ರ್‍ಯಾಂಕ್.
- **ಮೇರಿ ಕ್ಯೂರಿ ಅವರ ಜನ್ಮ ದಿನದ ಪ್ರಯುಕ್ತ,** ರಾಜ್ಯದ ವಿವಿಧೆಡೆ, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನಾಚರಣೆ.
- **12ನೇ ತಾರೀಖು,** ಪಕ್ಷಿ ಮಾನವ ಸಲೀಂ ಅಲಿ ಅವರ ಜನ್ಮದಿನ; ರಾಜ್ಯಾದ್ಯಂತ ಪಕ್ಷಿ ವೀಕ್ಷಣೆ ಸಪ್ತಾಹ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>